
ವಾಕ್ಯಗಳು, ಅರ್ಥಕ್ಕೆ ನಿಂತ ಪ್ಯಾರಾಗಳಿದ್ದು ಓದುವಾಗ ಕಿರಿಕಿರಿಯುಂಟು ಮಾಡುತ್ತವೆ. ಪೇಂಟಿಂಗ್‌ಗಳು ಆಚೀಚೆ ಪುಟಗಳಲ್ಲಿ ಹಂಚಿಹೋಗುವಂತೆ ಮುದ್ರಿಸಿರುವ ಬಗೆಯಿಂದ, ಹಲವೆಡೆ ಸಾಕಷ್ಟು ಖಾಲಿ ಅವಕಾಶ ಮತ್ತೂ ಕೆಲವೆಡೆ ಒತ್ತೊತ್ತಾಗಿ ಮುದ್ರಣಗೊಂಡಿರುವ ಪಠ್ಯದಿಂದ, ಏಕರೂಪತೆಯಿರದ ಪುಟವಿನ್ಯಾಸದಿಂದ ರಸಭಂಗದ ಅನುಭವವಾಗುವುದನ್ನು ತಪ್ಪಿಸಬಹುದಿತ್ತು. ಇವೆಲ್ಲ ತಾಂತ್ರಿಕ ದೋಷಗಳಷ್ಟೇ. 130 ಜಿಎಸ್‌ಎಂ ದಪ್ಪನೆಯ ಆರ್ಟ್‌ಪೇಪರ್ ಹಾಳೆಯಲ್ಲಿ, ಬಹುವರ್ಣದಲ್ಲಿ ಮುದ್ರಣಗೊಂಡಿರುವ ಈ 1/4 ಡೆಮಿ ಸೈಜಿನ ಕೃತಿಯನ್ನು ಪ್ರಕಟಿಸಿದ 'ಬಸವ ಕಲಾನಿಕೇತನ' ಪ್ರಕಾಶನದ ಕಲಾ ಕಾಳಜಿ ಕೂಡ ಮೆಚ್ಚುವಂಥದ್ದೇ.

ತಮ್ಮದೇ ಹಿಂದಿನ 'ರೂಪ–ನಿರೂಪ' ಕೃತಿಯ ವಿಸ್ತರಣೆಯಂತಿರುವ ಈ ಕೃತಿಗಾಗಿ ಬಾದಾಮಿಯವರು ಸಾಕಷ್ಟು ಶ್ರಮ ಹಾಕಿರುವುದು ಹೆಜ್ಜೆ ಹೆಜ್ಜೆಗೂ ಎದ್ದು ಕಾಣಿಸುತ್ತದೆ. ಹಿರಿಯ ಕಲಾವಿಮರ್ಶಕ ಕೆ.ವಿ. ಸುಬ್ರಹ್ಮಣ್ಯಂ ಅವರು ತಮ್ಮ ಮುನ್ನುಡಿಯಲ್ಲಿ ಮುಖ್ಯವಾಗಿ ಈ ಕೃತಿಯ ಐತಿಹಾಸಿಕ ಪ್ರಜ್ಞೆಯನ್ನು ಗುರುತಿಸಿ ಮೆಚ್ಚಿ ಮಾತನಾಡಿದ್ದಾರೆ. ಇದೊಂದು ವಿಶ್ವಾತ್ಮಕ ದೃಶ್ಯಕಲಾ ಯಾತ್ರೆಯ ಹೊಳಹುಗಳನ್ನು ಒಳಗೊಂಡಿರುವ ಕೃತಿ ಎಂದು ಸರಿಯಾಗಿಯೇ ಗುರುತಿಸಿದ್ದಾರೆ. ಅವರ ಗಂಭೀರವಾದ ಮುನ್ನುಡಿಯು ವಿಮರ್ಶಾತ್ಮಕ ಒಳನೋಟಗಳನ್ನು ಹೊಂದಿದ್ದರೆ, ಮುನ್ನುಡಿಯಲ್ಲಿರುವ ಟಿಪ್ಪಣಿಯ ವಿವರಗಳು ಕಲಾ ಇತಿಹಾಸದ ಕುತೂಹಲಕರ ಮಾಹಿತಿಯನ್ನು ಒಳಗೊಂಡಿವೆ.

ಕಲೆಯ ಇತಿಹಾಸ, ಕಲಾಪಥಗಳ ಅನನ್ಯತೆ, ಕಲಾವಿದರ ಜೀವನ ವಿವರ, ಕಲಾವಿದ ಮತ್ತು ಕಲಾಕೃತಿಗಳ ಚಿತ್ರಗಳು



ಎಲ್ಲವೂ ಇಲ್ಲಿ ಒಂದೇ ಕಡೆಯಲ್ಲಿ ಸಿಗುವಂತೆ ಮಾಡುವ ಮೂಲಕ, ಒಂದು ಸಮಗ್ರ ನೋಟವನ್ನು ದೊರಕಿಸಲು ಲೇಖಕರು ಪ್ರಾಮಾಣಿಕವಾದ ಪ್ರಾಂಜಲ ಪ್ರಯತ್ನವನ್ನು ಮಾಡಿದ್ದಾರೆ. ಹೀಗೆ ಬರೀ ಸಂಗ್ರಹ ಗುಣಕ್ಕೇ ಇದನ್ನು ಸೀಮಿತಗೊಳಿಸದೆ; ಕಲಾಕೃತಿಗಳನ್ನು ತಾಂತ್ರಿಕವಾಗಿಯೂ, ವಿಮರ್ಶಾತ್ಮಕವಾಗಿಯೂ ವಿಶ್ಲೇಷಣೆಗೆ ಒಳಪಡಿಸುವ ಕಾರ್ಯವನ್ನೂ ಮಾಡುವ ಮೂಲಕ ಕೃತಿಯ ಚೆಲುವನ್ನು ಇಮ್ಮಡಿಗೊಳಿಸಿದ್ದಾರೆ. ಎಲ್ಲ ಕಲಾಶಾಲೆಗಳು ಮತ್ತು ಕಲಾಸಕ್ತರ ಸಂಗ್ರಹದಲ್ಲಿ ಇರಬೇಕಾದ ವಿಶಿಷ್ಟ ಕೃತಿಯಿದು. ಇತರೆ ಅಕ್ಷರೇತರ ಮಾಧ್ಯಮಗಳ ಕುರಿತೂ ತಿಳಿವಳಿಕೆಯನ್ನು ಹೆಚ್ಚಿಸುವ ಇಂಥ ಕೃತಿಗಳು ಕನ್ನಡದಲ್ಲಿ ಪ್ರಕಟವಾಗಬೇಕು. ಹಾಗಾದರೂ ಅಕ್ಷರ ಮತ್ತು ಅಕ್ಷರೇತರ ಮಾಧ್ಯಮಗಳ ನಡುವಿನ ಕಂದಕ ಒಂದಷ್ಟಾದರೂ ಕಡಿಮೆಯಾದೀತು.

●